ಹ್ಯೂಯಾಂಗ್ ರಾಜವಂಶದ ಸಾಮ್ರಾಟರು (ಕ್ರಿ. ಪೂ. ೨೫೯–೨೧೦) ಮತ್ತು ಹಾನ್ ಮನೆತನದ 'ವು' ಚಕ್ರವರ್ತಿಗಳು ಈ ಪರ್ವತವನ್ನು ಹತ್ತುತ್ತಿದ್ದರಂತೆ. ಮುಂದೆ ಜ್ಯೂಯಾಗ್ ಝೂಾಂಗ್ ಎಂಬ ಟ್ಯಾಂಗ್ ವಂಶದ ಚಕ್ರವರ್ತಿ (ಕ್ರಿ.ಶ ೮ನೇ ಶತಕ) ಈ ಪವಾಡ ಸದೃಶವಾದ ಸಂಜೀವನೀ ಸಸ್ಯವನ್ನು ಸಂಗ್ರಹಿಸಿ, ಸಾವಿಲ್ಲದಂತೆ ಮಾಡುವ ಅಮೃತವನ್ನು ತಯಾರು ಮಾಡಲು ವೈದ್ಯರನ್ನು ಕಳಿಸಿದ್ದನಂತೆ. [೧೩]

ಸುಪ್ರಸಿದ್ಧ ತಾವೊ ದೇಗುಲವಾದ ತಾಯ್‌ಕ್ವಿಂಗ್‌ಗಾಂಗ್ (ಪರಮ ಪಾವನವಾದ ದೇಗುಲ) ಈ ಬೆಟ್ಟದಲ್ಲಿದೆ. ಮೂವರು ಪರಿಶುದ್ಧರನ್ನಿಲ್ಲಿ ಪೂಜಿಸುತ್ತಾರೆ. ಇನ್ನೂ ಹಲವಾರು ತಾವೊ ದೇಗುಲಗಳು, ಜೊತೆಗೆ ಬೌದ್ಧ ಮೂರ್ತಿಗಳು, ಚಿಕ್ಕ-ದೊಡ್ಡವಿಗ್ರಹಗಳು ಈ ಗಿರಿಯಲ್ಲಿವೆ. ಹಿಂದೆ ಬೌದ್ಧಬಿಕ್ಷುಣಿಯರಿರುತ್ತಿದ್ದ ಹ್ಯೂಯಾನ್ ಮಠವೊಂದೇ ಬೌದ್ಧಧರ್ಮದ ಆವಾಸಸ್ಥಳ. ಈಗ ಇಲ್ಲಿ ಯಾವ ಭಿಕ್ಷುಗಳೂ ಇಲ್ಲ.





### ಝೂಾಂಗ್ ಗ್ಯೂಯಾ ಲಾವ್ ಮಠ

ಬೀಜಿಂಗ್‌ನ ಪಶ್ಚಿಮಕ್ಕೆ ೩೫೦ ಕಿ.ಮೀ. ದೂರದಲ್ಲಿರುವ ಡಾಟಾಂಗ್ ಬಳಿಯ ಹೆಂಗ್ ಪರ್ವತದ ಮೇಲೆ ಈ ಮಠ ಇದೆ. ಇದು ಸಮುದ್ರ ಮಟ್ಟಕ್ಕೆ ೨ ಸಾವಿರ ಮೀಟರ್ ಎತ್ತರದಲ್ಲಿದೆ. ಕಲ್ಲು ಬಂಡೆಗಳ ಈ ಬೆಟ್ಟದ ಇಳಿಜಾರಿನ ಹಂತಗಳ ಮೇಲೆ ಮಠಗಳೂ ದೇಗುಲಗಳೂ ಇವೆ. ನೇರವಾಗಿ ನಿಂತಿರುವ ಗಿರಿಶಿಖರಕ್ಕೆ ಅಂಟಿಕೊಂಡಂತೆ ಕಟ್ಟಡಗಳಿವೆ. ಇಲ್ಲಿ ಕಪ್ಪು ಉಡುಪು ಧರಿಸಿರುವ ತಾವೊ ಪೂಜಾರಿಗಳನ್ನು ಕಾಣುತ್ತೇವೆ. ಇಲ್ಲಿನ ದೇವರುಗಳು ಗುವಾಂಡಿ[೧೪]; (ದುಷ್ಟಶಕ್ತಿಗಳ ಮೇಲೆ ಸಂಪೂರ್ಣ ಹಿಡಿತವಿರುವ ದೇವತೆ) ಸಾಹಿತ್ಯ-ಸಂಸ್ಕೃತಿಗಳ ಅಧಿದೇವತೆ ವೆನ್‌ಚಾಂಗ್ (ತಾವೊ ಧರ್ಮದ ಪೌರಾಣಿಕ ದೇವತೆ); ಫ್ಯೂ, ಲು, ಷೌ (ಚೀನಾದ ಸಾಂಪ್ರದಾಯಿಕ ಧರ್ಮದಲ್ಲಿರುವ ಮೂವರು ದೇವತೆಗಳು - ಕ್ರಮವಾಗಿ ಸಂಪತ್ತು, ಯಶಸ್ಸು ಮತ್ತು ದೀರ್ಘಾಯುಷ್ಯಗಳ ಅಧಿದೇವತೆಗಳು). ಇಲ್ಲೊಂದು ಗುಹೆ ಇದೆ. ಇದರ ಹೆಸರು ಹ್ಯೂಕ್ಸಿಯಾನ್. ಬಹು ಪ್ರಾಚೀನ ದಂತಕಥೆಗಳ ಕಿನ್ನರರು ಇಲ್ಲಿ ರಸ ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದರಂತೆ.

### ತೂಗು ಮಠ

ಡಾಟಾಂಗ್ ಪಟ್ಟಣದಿಂದ ೮೦ ಕಿ.ಮೀ. ದೂರದಲ್ಲಿ ನೆಲದಿಂದ ೭೫ ಮೀಟರ್ ಎತ್ತರದಲ್ಲಿ ಪ್ರಪಾತಕ್ಕೆ ಚಾಚಿಕೊಂಡಿರುವ, ಯಾವಾಗ ಕುಸಿದು ಬೀಳುವುದೊ ಎಂಬಂತೆ ಆತಂಕ ಸ್ಥಿತಿಯಲ್ಲಿರುವ ಬಂಡೆಯ ಮೇಲೆ, ೧೫೦೦ ವರ್ಷ ಹಳೆಯ ಈ ಮಠ ನಿಂತಿದೆ. ಇಡೀ ಕಟ್ಟಡದ ರಚನೆಯನ್ನು ಚಾಚಿಕೊಂಡಿರುವ ಬಂಡೆ ತೂಗುತ್ತಿರುವಂತಿದೆ. ಚೀನಾದ ಮುಖ್ಯ ಧರ್ಮಗಳಾದ ಬೌದ್ಧ, ತಾವೊ ಮತ್ತು ಕನ್ಫ್ಯೂಷಿಯಸ್ ಈ ಮೂರಕ್ಕೂ ಈ ನಿವಾಸ ಆಶ್ರಯ ನೀಡಿದೆ, ಕೀರ್ತಿಗೆ ಭಾಜನವಾಗಿದೆ. ಈ ಮಠದಲ್ಲಿ ಈಗ ಯಾರೂ ವಾಸವಾಗಿಲ್ಲ. ಯಾತ್ರಾರ್ಥಿಗಳು ಮಾತ್ರ ಬಂದು ಹೋಗುತ್ತಾರೆ. ಇದೊಂದು ಪ್ರೇಕ್ಷಣೀಯ ಸ್ಥಳವಾಗಿದೆ. ***(ಮುಂದುವರಿಯುವುದು)***

೧೩. ಕ್ವಿನ್ ಷಿ ಹ್ಯೂಯಾಂಗ್ (೨೦೧೪), *ವಿಕಿಪೀಡಿಯಾ*

೧೪. ಗುವಾಂಡಿ ಅಥವಾ ಗ್ಯೂ ಆನ್‌ಯೂ. ಇವನು ಪೂರ್ವಪ್ರಾಂತದ ಹಾನ್ ರಾಜವಂಶದ (ಕ್ರಿ.ಶ. ೩ನೆ ಶತಮಾನ) ಅರಸರ ಆಳ್ವಿಕೆಯಲ್ಲಿ ಸೇನಾಪತಿಯಾಗಿದ್ದ, ಮುಂದೆ ಸಮರದೇವರೆಂದು ಅವನಿಗೆ ದೈವತ್ವ ನೀಡಿದರು.



ತೂಗು ಮಠ

ಸ್ವಾಮಿ ನಿತ್ಯಸ್ಥಾನಂದ

# ಆಂತರಿಕ ಗುಣವಿಶ್ಲೇಷಣೆ




ಹದಿನಾಲ್ಕನೆಯ ಅಧ್ಯಾಯದಲ್ಲಿ ಮೂರು ಗುಣಗಳ ಸಾಮಾನ್ಯ ಲಕ್ಷಣಗಳನ್ನು ಹೇಳಿದ್ದಾಯಿತು. ಹದಿನೇಳನೆಯ ಅಧ್ಯಾಯದಲ್ಲಿ ಇದೇ ವಿಷಯವನ್ನು ಮುಂದುವರಿಸಿ, ಆಹಾರ ಮುಂತಾದ ಮನುಷ್ಯನ ಬಾಹ್ಯ ವಿಷಯಗಳಿಗೆ ಸಂಬಂಧಿಸಿದಂತೆ ಗುಣತ್ರಯ ವಿಶ್ಲೇಷಣೆಯನ್ನು ಮಾಡಲಾಯಿತು. ಮತ್ತೆ ಹದಿನೆಂಟನೆಯ ಅಧ್ಯಾಯದಲ್ಲಿ ಇದೇ ವಿಷಯವನ್ನು ತೆಗೆದುಕೊಂಡು, ಮನುಷ್ಯನ ಆಂತರಿಕ ವಿಷಯಗಳಿಗೆ ಸಂಬಂಧಿಸಿದಂತೆ ಗುಣತ್ರಯ ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ವಿಶ್ಲೇಷಣೆಯ ಮುಖ್ಯ ಉದ್ದೇಶ ಮನುಷ್ಯನಿಗೆ ತನ್ನ ಬಗೆಗಿನ ಅರಿವನ್ನು ಉಂಟುಮಾಡುವುದು. ಈಗ ತಾನು ಯಾವ ಸ್ಥಿತಿಯಲ್ಲಿದ್ದೇನೆ, ತನ್ನನ್ನು ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ಈ ವಿಶ್ಲೇಷಣೆಯ ಮೂಲಕ ಅರ್ಥಮಾಡಿಕೊಳ್ಳಬಹುದು.

ಮೊದಲನೆಯದಾಗಿ ಶ್ರೀಕೃಷ್ಣನು ಜ್ಞಾನವನ್ನು ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಎಂದು ಮೂರು ಬಗೆಯಾಗಿ ವಿಭಾಗಿಸುತ್ತಾನೆ. ಎಲ್ಲ ವೈವಿಧ್ಯತೆಗಳ ಹಿಂದೆ ಏಕತೆಯನ್ನು ಕಾಣುವುದು ಸಾತ್ತ್ವಿಕ ಜ್ಞಾನವೆಂದು ಅವನು ಹೇಳುತ್ತಾನೆ. ಜ್ಞಾನದಲ್ಲಿ ಮೂರು ಹಂತಗಳಿವೆ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಎಲ್ಲ ವಿಷಯಗಳನ್ನು ಪ್ರತ್ಯೇಕವಾಗಿ, ಬಿಡಿಬಿಡಿಯಾಗಿ ನೋಡುವುದು ಮೊದಲನೆಯ ಹಂತ. ಎರಡನೆಯ ಹಂತದಲ್ಲಿ ಎಲ್ಲ ವಿಷಯಗಳೂ ಪರಸ್ಪರ ಸಂಬಂಧವುಳ್ಳವುಗಳೆಂದೂ, ಹಾಗೂ ಪರಸ್ಪರ ಅವಲಂಬಿಸಿರುವುದೆಂದೂ ಕಂಡುಬರುತ್ತದೆ. ಯಾವುದೇ ವಸ್ತುವನ್ನೂ ಬೇರೆ ವಿಷಯಗಳಿಗೆ ಸಂಬಂಧಿಸದಂತೆ, ಸಂಪೂರ್ಣ ಪ್ರತ್ಯೇಕವಾಗಿ ನೋಡಲಾಗುವುದೂ ಇಲ್ಲ, ಭಾವಿಸಲಾಗುವುದೂ ಇಲ್ಲ. ಎಲ್ಲವೂ ಒಂದೇ ಸತ್ಯ, ಒಂದೇ ಸತ್ಯದ ವಿವಿಧ ರೂಪಗಳು ಎಂಬ ಕಾಣ್ಕೆಯೆ ಜ್ಞಾನದ ಮೂರನೇ ಹಂತ, ಇದನ್ನೇ ಸಾತ್ತ್ವಿಕ ಜ್ಞಾನ ಎಂದು ಕರೆಯುವುದು. ಉದಾಹರಣೆಗೆ, ಬರಿಯ ಅಲೆಗಳನ್ನು ನೋಡುವುದು ಪ್ರತ್ಯೇಕತೆಯ ಜ್ಞಾನ, ಆದರೆ ಅಲೆಗಳ ಹಿಂದಿರುವ ನೀರನ್ನು ನೋಡುವುದು ಏಕತೆಯ ಜ್ಞಾನ. ನಿಜವಾಗಿಯೂ ನೀರನ್ನು ಹೊರತಾಗಿ ಅಲೆಯೆಂಬ ವಸ್ತುವಾವುದೂ ಇಲ್ಲ; ಮಣ್ಣಿನ ಹೊರತಾಗಿ ಮಡಕೆ ಎಂಬ ಪ್ರತ್ಯೇಕ ವಸ್ತುವಾವುದೂ ಇಲ್ಲ. ಈ ರೀತಿ ಜಗತ್ತಿನಲ್ಲಿ ಎಲ್ಲ ವೈವಿಧ್ಯತೆಗಳ ಹಿಂದೆಯೂ ಒಂದೇ ಸತ್ಯವನ್ನು ಕಾಣುವುದು ಸಾತ್ತ್ವಿಕ ಜ್ಞಾನ.

ನಾವು ಅನೇಕ ಮಾಹಿತಿಗಳನ್ನು ಸಂಗ್ರಹಿಸುತ್ತೇವೆ, ಅವುಗಳೆಲ್ಲ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಉಳಿದರೆ ಅದು ಪ್ರತ್ಯೇಕತೆಯ ಜ್ಞಾನ. ಇವುಗಳನ್ನು ಪರಸ್ಪರ ಸಂಬಂಧಿಸಿದಾಗ, ಅವುಗಳೆಲ್ಲವನ್ನೂ ಸಮುಚ್ಚಯಗೊಳಿಸಿ, ಹೊಂದಿಸಿ ಒಂದು ನಿರ್ದಿಷ್ಟ ರೂಪವನ್ನು ನೀಡಿದಾಗ (conceptualisation) ಅದು ಸಾಂಬಂಧಿಕ ಜ್ಞಾನವಾಗುತ್ತದೆ. ಎಲ್ಲ ಜ್ಞಾನವನ್ನೂ ಆತ್ಮದ ಅಭಿವ್ಯಕ್ತಿಯೆಂದು ತಿಳಿದಾಗ ಮತ್ತು ಅನುಭವಿಸಿದಾಗ ಅದು ಏಕತೆಯ ಜ್ಞಾನವಾಗುತ್ತದೆ. ಏಕತೆಯೇ ಜ್ಞಾನದ ಗುರಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಮಾಹಿತಿಯು ಜ್ಞಾನವಾಗಿ ಪರಿವರ್ತಿಸಬೇಕು, ಹಾಗೂ ಜ್ಞಾನವು ವಿಜ್ಞಾನವಾಗಿ (wisdom) ಪರಿಪಕ್ವಗೊಳ್ಳಬೇಕು. ಈ ರೀತಿಯ ವಿಜ್ಞಾನದ ಬಗ್ಗೆ ಆಂಗ್ಲಭಾಷೆಯಲ್ಲಿ ಒಂದು ಸುಂದರ ಹೇಳಿಕೆ ಇದೆ:

When you acquire wealth you feel the need
to protect it;
When you acquire knowledge you feel the need
to share it;
When you acquire wisdom you don't
feel any need.

(ನೀವು ಸಂಪತ್ತನ್ನು ಪಡೆದಾಗ ಅದನ್ನು ರಕ್ಷಿಸಿಕೊಳ್ಳುವ ಅವಶ್ಯಕತೆಯಿರುತ್ತದೆ; ನೀವು ಜ್ಞಾನವನ್ನು ಪಡೆದಾಗ ಅದನ್ನು ಇತರರೊಡನೆ ಹಂಚಿಕೊಳ್ಳುವ ಆವಶ್ಯಕತೆಯಿರುತ್ತದೆ. ನೀವು ವಿಜ್ಞಾನವನ್ನು ಪಡೆದಾಗ ನಿಮಗೆ ಯಾವ ಆವಶ್ಯಕತೆಯೂ ಇರುವುದಿಲ್ಲ.) ಮಾಹಿತಿಯು ಆಳವಾದ ಚಿಂತನೆಯ ಮೂಲಕ ಜ್ಞಾನವಾಗುತ್ತದೆ; ಜ್ಞಾನವು ಅನುಭವದ ಮೂಲಕ ವಿಜ್ಞಾನವಾಗುತ್ತದೆ (wisdom). ಭೌತ ವಿಜ್ಞಾನವು ಪ್ರತ್ಯೇಕತಾಜ್ಞಾನವನ್ನೂ ತತ್ತ್ವಶಾಸ್ತ್ರವು ಸಾಂಬಂಧಿಕ ಜ್ಞಾನವನ್ನೂ ಧರ್ಮವು ಏಕತಾಜ್ಞಾನವನ್ನೂ ಪ್ರತಿನಿಧಿಸುತ್ತವೆ.

ಪ್ರತ್ಯೇಕತೆಯ ದೃಷ್ಟಿ – ಎಲ್ಲ ವ್ಯಕ್ತಿಗಳನ್ನೂ ವಸ್ತುಗಳನ್ನೂ ವಿಷಯಗಳನ್ನೂ ನಾನಾ ಬಗೆಯಾಗಿ ನೋಡುವುದು, ಒಟ್ಟಿನಲ್ಲಿ ಎಲ್ಲದರಲ್ಲಿಯೂ ಭೇದವನ್ನು ಕಾಣುವುದು ರಾಜಸಿಕ ಜ್ಞಾನ. ದೃಷ್ಟಿದೋಷವಿರುವ ಕೆಲವರಿಗೆ ಒಂದೇ ಎರಡಾಗಿ ಕಾಣುತ್ತದೆ! ಆದರೆ ಭೇದದೃಷ್ಟಿಯುಳ್ಳವರಿಗೆ ಎಲ್ಲವೂ ನಾನಾ ರೂಪದಿಂದ ಕಾಣುತ್ತವೆ. ಅವರು ಒಳ್ಳೆಯ ವ್ಯಕ್ತಿಯಲ್ಲಿಯೂ ಅನೇಕ ದೋಷಗಳನ್ನು ಹುಡುಕಬಲ್ಲರು. ಈ ರಾಜಸಿಕ ಜ್ಞಾನದಲ್ಲಿ ಸತ್ತ್ವಾಂಶ ಸೇರಿಕೊಂಡಿದ್ದರೆ, ಆಗ ಅಂತಹ ವ್ಯಕ್ತಿಯು ದುಷ್ಟನಲ್ಲಿಯೂ ಅನೇಕ ಸದ್ಗುಣಗಳನ್ನು ನೋಡಬಲ್ಲನು. ಸಾಮಾನ್ಯವಾಗಿ ಜನರು ವೈವಿಧ್ಯವನ್ನು ಬಯಸುತ್ತಾರೆ– ಆದ್ದರಿಂದಲೇ ಒಂದೇ ಬಳಕೆಯ ಅನೇಕ ವಸ್ತುಗಳಿರುತ್ತವೆ. ಸೋಪಿನ ಬಳಕೆ ಒಂದೇ ಆದರೂ ನಮಗೆ ಅನೇಕ ಬಗೆಯ ಸೋಪು ಬೇಕು. ಒಂದೇ ಮನೆಯಲ್ಲಿದ್ದು ಬೇಸರವಾಗಿ ಅನೇಕ ಮನೆ ಮಾಡುತ್ತಾರೆ, ಒಂದೇ ಕಾರನ್ನು ಬಳಸಿ ಬೇಸರವಾಗಿ ಬೇರೆ ಬೇರೆ ಕಾರುಗಳನ್ನು ಕೊಂಡುಕೊಳ್ಳುತ್ತಾರೆ, ಒಂದೇ ಮೊಬೈಲ್ ಫೋನ್ ಬಳಸಿ ಬೇಸರವಾಗಿ ಹೊಸಹೊಸತನ್ನು ಕೊಂಡುಕೊಳ್ಳುತ್ತಾ ಹೋಗುತ್ತಾರೆ. ಈ ಪ್ರವೃತ್ತಿ ವಸ್ತುಗಳಿಗೆ ಮಾತ್ರ ಸೀಮಿತವಾಗಿದ್ದರೆ ಅಷ್ಟೇನೂ ದೋಷವಲ್ಲ; ಆದರೆ ವ್ಯಕ್ತಿಗಳಿಗೂ ಇದು ಅನ್ವಯವಾಗುವುದು ತುಂಬ

ಶೋಚನೀಯ ಪರಿಸ್ಥಿತಿ! ನಾವು ಉಪಯುಕ್ತತೆಯ ಕಡೆಗೆ ಮಾತ್ರ ಪ್ರಾಧಾನ್ಯವನ್ನು ನೀಡಿದರೆ (ಇದು ಎಲ್ಲ ಬಳಕೆಯ ವಸ್ತುಗಳ ಹಿಂದಿರುವ ಏಕತೆ) ಅನೇಕದರ ಕಡೆ ಮನಸ್ಸು ಹೋಗುವುದಿಲ್ಲ. ಇದೇ ರೀತಿ ವ್ಯಕ್ತಿಯು ಮುಖ್ಯವಾಗಿ, ಅವನ ಬಾಹ್ಯಾಂಶಗಳು ಗೌಣವಾಗಬೇಕು. ನಾವು ಇಂದ್ರಿಯಗಳಿಗೆ ಪ್ರಾಧಾನ್ಯ ನೀಡಿದಷ್ಟೂ ವೈವಿಧ್ಯಕ್ಕೆ ದಾಸರಾಗುತ್ತೇವೆ.

''ಜ್ಞಾನವು ಮನೋಬಲವನ್ನು ಹೆಚ್ಚಿಸಬೇಕು, ಇದೇ ಜ್ಞಾನದ ನಿಜವಾದ ಮೌಲ್ಯ'' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಇದು ಸಾಧ್ಯವಾಗುವುದು ಕೇವಲ ಇಂದ್ರಿಯಜ್ಞಾನವನ್ನು, ಕೇವಲ ಇಂದ್ರಿಯತೃಪ್ತಿಯನ್ನು ಮೀರಿಹೋದಾಗ. ಆಹಾರವು ಸರಿಯಾಗಿ ಜೀರ್ಣವಾದರೆ ಅದು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಹಾಗೆ ಜೀರ್ಣವಾಗಬೇಕಾದರೆ ನಾವು ದೈಹಿಕವಾಗಿ ಕ್ರಿಯಾಶೀಲರಾಗಿರಬೇಕು. ಹಾಗೆಯೇ ನಾವು ಮಾನಸಿಕವಾಗಿ ಕ್ರಿಯಾಶೀಲರಾಗಿದ್ದರೆ ನಾವು ಪಡೆದ ಜ್ಞಾನ ಸರಿಯಾಗಿ ಜೀರ್ಣವಾಗಿ, ಮನೋಬಲ ವೃದ್ಧಿಯಾಗುತ್ತದೆ. ಸಂಸ್ಕೃತ ಸುಭಾಷಿತವೊಂದಿದೆ:

**ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾ ಗ್ರಂಥಿಭ್ಯೋ ಧಾರಿಣೋ ವರಾಃ ।**
**ಧಾರಿಭ್ಯೋ ಜ್ಞಾನಿನಃ ಶ್ರೇಷ್ಠಾಃ ಜ್ಞಾನಿಭ್ಯೋ ವ್ಯವಸಾಯಿನಃ ॥**

''ಅವಿದ್ಯಾವಂತರಿಗಿಂತಲೂ ಗ್ರಂಥಾಧ್ಯಯನ ಮಾಡಿದವರು ಶ್ರೇಷ್ಠರು. ಗ್ರಂಥಾಧ್ಯಯನ ಮಾಡಿದವರಿಗಿಂತಲೂ ಓದಿದ್ದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬಲ್ಲವರು ಮೇಲು. ಇವರಿಗಿಂತಲೂ ಮೇಲಾದವರು ಮನನಶೀಲರಾದ ಜ್ಞಾನಿಗಳು. ಜ್ಞಾನಿಗಳಿಗಿಂತಲೂ ಮಿಗಿಲಾದವರು ಕ್ರಿಯಾಶೀಲರು, ಅಂದರೆ ಜ್ಞಾನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ಬಾಳುವವರು.''

ಯಾವುದೇ ನಿರ್ದಿಷ್ಟ ಕಾರಣವಿಲ್ಲದ, ಏಕದೇಶೀಯವಾದುದನ್ನೇ ಪೂರ್ಣವೆಂದು ಭಾವಿಸುವ, ತಪ್ಪು ಗ್ರಹಿಕೆಯ ಅಲ್ಪ ಜ್ಞಾನವನ್ನು **ತಾಮಸ**ವೆಂದು ಪರಿಗಣಿಸಲಾಗಿದೆ. ಇದು ಪ್ರಮಾಣದ ಆಧಾರವಿಲ್ಲದ ಕಾಲ್ಪನಿಕ ಜ್ಞಾನ. ಗಾಳಿಸುದ್ದಿ, ಸುಳ್ಳುಸುದ್ದಿ ಇತ್ಯಾದಿಗಳನ್ನೇ ಇಷ್ಟಪಡುವವರು ಅನೇಕರಿರುತ್ತಾರೆ, ಯಥಾರ್ಥವಾದುದು ಅವರಿಗೆ ರುಚಿಸುವುದೇ ಇಲ್ಲ. ತಮ್ಮ ಜೀವನದಲ್ಲಿ ಸಂಭವಿಸುವ ಯಾವುದೋ ಅಹಿತಕರ ಘಟನೆಗೆ ತಮಗಾಗದ ಯಾರೋ ಕಾರಣವೆಂದು, ಯಾವುದೇ ನಿರ್ದಿಷ್ಟವಾದ ಆಧಾರವೂ ಇಲ್ಲದೆ, ಭಾವಿಸುತ್ತಾರೆ; ಮತ್ತು ಅದೇ ಸತ್ಯವೆಂದು ಅವರನ್ನು ಒಳಗಿಂದೊಳಗೇ ಶಪಿಸುತ್ತ ಹೋಗುತ್ತಾರೆ. ಪೂರ್ಣ ಸತ್ಯವನ್ನು ತಿಳಿಯುವ ತಾಳ್ಮೆಯಾಗಲಿ ಪ್ರವೃತ್ತಿಯಾಗಲಿ ಅವರಿಗಿರುವುದಿಲ್ಲ – ಅವರ ದೃಷ್ಟಿ ತಮಗೆ ಮಾತ್ರ ಸೀಮಿತವಾಗಿರುವುದರಿಂದ. ಅವರ ಅರಿವು ಸಾಮಾನ್ಯವಾಗಿ ತಮ್ಮ ಕಾರ್ಯವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ, ಅದೇ ಅವರಿಗೆ ಸರ್ವಸ್ವವಾಗಿರುತ್ತದೆ. ಒಂದು ಪ್ರದೇಶದಲ್ಲಿ ದೇವಸ್ಥಾನ ನಿರ್ಮಾಣ ಕಾರ್ಯ ನಡೆಯುತ್ತಿರುತ್ತದೆ. ಮೂವರು ಹತ್ತಿರದಲ್ಲಿ ಕಲ್ಲು ಒಡೆಯುತ್ತಿರುತ್ತಾರೆ. ಅಲ್ಲಿಗೆ ಭೇಟಿ ನೀಡಿದವರೊಬ್ಬರು ಅವರನ್ನು ''ಏನು ಮಾಡುತ್ತಿರುವಿರಿ?'' ಎಂದು ಕೇಳಿದಾಗ ಮೂವರಿಂದಲೂ ಬೇರೆ ಬೇರೆ ಉತ್ತರ ಬರುತ್ತದೆ. ಮೊದಲನೆಯವನು ಹೇಳಿದ, ''ನಾನು ದೇವಸ್ಥಾನವನ್ನು ಕಟ್ಟುತ್ತಿರುವೆ'' ಎಂದು. ಎರಡನೆಯವನು, ''ನನ್ನ ಜೀವನೋಪಾಯಕ್ಕಾಗಿ ಕೆಲಸ ಮಾಡುತ್ತಿರುವೆ'' ಎಂದು ಹೇಳಿದ. ಮೂರನೆಯವನು, 'ನಾನು ಕಲ್ಲು ಒಡೆಯುತ್ತಿರುವೆ' ಎಂದು ಉದಾಸೀನತೆಯಿಂದ ನುಡಿದನು. ಮೊದಲನೆಯವನಲ್ಲಿ ಪೂರ್ಣತೆಯ ದೃಷ್ಟಿಯಿದೆ, ಅವನು ತನ್ನ ಸೀಮಿತ ಕೆಲಸವನ್ನು ಪೂರ್ಣ ದೇವಾಲಯ ನಿರ್ಮಾಣದೊಂದಿಗೆ ಒಂದಾಗಿಸಿಕೊಂಡು, ಅದರಲ್ಲಿ ಸಾರ್ಥಕತೆಯನ್ನು ಕಾಣುತ್ತಾನೆ. ಮೂರನೆಯವನ ಅರಿವು ತಾನು ಮಾಡುತ್ತಿರುವ ಕೆಲಸಕ್ಕೇ ಸೀಮಿತವಾಗಿದೆ. ಅದೇ ಅವನಿಗೆ ಎಲ್ಲವೂ ಆಗಿದೆ, ಅವನಿಗೆ ಅಲ್ಪವೇ ಪೂರ್ಣವಾಗಿದೆ. ತಾಮಸ ಜ್ಞಾನವು ಕ್ಷುಲ್ಲಕ ವಿಷಯಗಳಿಗೂ ಅಶ್ಲೀಲ ವಿಷಯಗಳಿಗೂ ಸಂಬಂಧಿಸಿರುವುದಾದ್ದರಿಂದಲೂ ಅದು ಅಲ್ಪವು.

ಮುಂದೆ ೨೩, ೨೪ ಮತ್ತು ೨೫ನೇ ಶ್ಲೋಕಗಳಲ್ಲಿ ಶ್ರೀಕೃಷ್ಣನು ಕರ್ಮವನ್ನು ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಎಂದು ಮೂರು ಬಗೆಯಾಗಿ ವಿಭಾಗಿಸುತ್ತಾನೆ. ಫಲಾಸಕ್ತಿಯಿಲ್ಲದೆ, ರಾಗದ್ವೇಷಗಳಿಲ್ಲದೆ, ಅನಾಸಕ್ತಿಯಿಂದ ಮಾಡಬೇಕಾದ ಕರ್ಮವನ್ನು ಮಾಡಿದರೆ ಅದು ಸಾತ್ತ್ವಿಕ ಕರ್ಮ. ಆಸೆಗಳ ಪೂರ್ತಿಗಾಗಿಯೂ ಅಹಂಕಾರದಿಂದಲೂ ಅತ್ಯಂತ ಆಯಾಸದಿಂದಲೂ ಮಾಡಿದ ಕರ್ಮ ರಾಜಸಿಕ ಕರ್ಮ. ಹಣ, ಅಧಿಕಾರ, ಕೀರ್ತಿ, ಇಂದ್ರಿಯ ಸುಖ ಇತ್ಯಾದಿಗಳನ್ನೇ ಪ್ರಧಾನ ಉದ್ದೇಶವನ್ನಾಗಿಟ್ಟುಕೊಂಡು ಮಾಡಿದ ಕರ್ಮ ರಾಜಸಿಕವಾದುದು. ಅನೇಕ ಸಂದರ್ಭಗಳಲ್ಲಿ ಸಮಾಜದ ಹಿತದೃಷ್ಟಿಯಿಂದ ಮಾಡಿದ ಕರ್ಮಗಳ ಹಿಂದೆ ಎಷ್ಟೋ ಸ್ವಾರ್ಥೋದ್ದೇಶಗಳು ಇರುತ್ತವೆ. ಸ್ವಹಿತಾಸಕ್ತಿಯು ಪರಹಿತಾಸಕ್ತಿಯಾಗಿ ಅಭಿವ್ಯಕ್ತವಾಗುವ ಸಂದರ್ಭಗಳು ಅನೇಕ. ಮತ್ತೆ ಅನೇಕರು ತಮ್ಮ ಅಹಂಕಾರದ ಹಸಿವನ್ನು ತೀರಿಸಿಕೊಳ್ಳಲು ಕರ್ಮನಿರತರಾಗಿರುತ್ತಾರೆ. ಈ ರೀತಿ ಹೆಮ್ಮೆಯಿಂದ ಮಾಡಿದ ಕರ್ಮ ರಾಜಸಿಕವಾದುದು. ಆಸೆಗಳ ಪ್ರೇರಣೆಯೂ ಇಲ್ಲದೆ, ಅಹಂಕಾರದಿಂದ ತುಡಿತವೂ ಇಲ್ಲದೆ ಪರಿಸ್ಥಿತಿಯ ಒತ್ತಡದಿಂದಾಗಿ ಅತ್ಯಂತ ಆಯಾಸದಿಂದ ಮಾಡಿದ ಕರ್ಮವೂ ರಾಜಸಿಕವಾದುದು. ಕರ್ಮವನ್ನು ನಾವು ಇಷ್ಟಪಡದಿದ್ದರೆ, ಅದರ ವಿರುದ್ಧ ಆಂತರಿಕ ಪ್ರತಿಕ್ರಿಯೆಯಿದ್ದರೆ ಆಗ ಸಾಮಾನ್ಯವಾಗಿ ಕರ್ಮವು ಆಯಾಸದಾಯಕವಾಗಿರುತ್ತದೆ, ಮತ್ತು ಅಂತಹ ಕರ್ಮದಲ್ಲಿ ಉತ್ಸಾಹವಿರುವುದಿಲ್ಲ, ಹಾಗೂ ಅದು ಬೇಸರವನ್ನು ಉಂಟುಮಾಡುತ್ತದೆ. ಅನೇಕ ಬಗೆಯ ನೌಕರಿ ಕೆಲಸಗಳು ಈ ವರ್ಗಕ್ಕೆ ಸೇರುತ್ತವೆ. ಇಂತಹ ಕೆಲಸದಲ್ಲಿ ನಿರತರಾಗಿರುವವರು ಕೆಲಸದಲ್ಲಿ ಯಾವುದೇ ರೀತಿಯ ತೃಪ್ತಿ ಮತ್ತು ಆನಂದವನ್ನು ಪಡೆಯದೇ ಇರುವುದರಿಂದ ಕಾರ್ಯಕ್ಷೇತ್ರದ ಹೊರಗೆ ಸುಖವನ್ನು ಬಯಸುತ್ತಾರೆ, ಆದ್ದರಿಂದ ಕೆಲಸವನ್ನು ಕಡೆಗಣಿಸುತ್ತಾರೆ.

ಕೆಲಸವನ್ನು ಹೊರಗಿನಿಂದ ಏನಾದರೂ ಪಡೆಯುವ ಸಾಧನವಾಗಿ ಪರಿಗಣಿಸದೆ, ಆಂತರಿಕ ಅಭಿವ್ಯಕ್ತಿಯ ಸಾಧನವಾಗಿ ಸ್ವೀಕರಿಸಬೇಕು. ಕೆಲಸದ ಮೂಲಕವೇ ನಮ್ಮ ಆಂತರಿಕ ಶಕ್ತಿಸಾಮರ್ಥ್ಯಗಳು ವ್ಯಕ್ತವಾಗುವುವು. ಈ ಅಭಿವ್ಯಕ್ತಿಯಲ್ಲಿ ಹಲವು ಹಂತಗಳಿವೆ. ಮೊದಲನೆಯದಾಗಿ, ನಮ್ಮ ಬಾಹ್ಯ ಶಕ್ತಿಸಾಮರ್ಥ್ಯಗಳನ್ನು ಕೆಲಸದ ಮೂಲಕ ವ್ಯಕ್ತಪಡಿಸುವುದರಿಂದ ನಾವು ಹೆಚ್ಚು ಶಕ್ತಿಸಾಮರ್ಥ್ಯ

ಗಳನ್ನು ಪಡೆಯುತ್ತೇವೆ. ನಮ್ಮ ಆಂತರಿಕ ಒಳ್ಳೆಯತನವನ್ನು ಸತ್ಕಾರ್ಯಗಳ ಮೂಲಕ ವ್ಯಕ್ತಪಡಿಸಬೇಕು. ಪ್ರೀತಿಸುವ ಸಾಮರ್ಥ್ಯವಿರುತ್ತದೆ, ಇದರ ಅಭಿವ್ಯಕ್ತಿಯೂ ವಿವಿಧ ಚಟುವಟಿಕೆಗಳ, ಮೃದು ನುಡಿಗಳ ಮತ್ತು ಪ್ರಾರ್ಥನೆಯ ಮೂಲಕ ಉಂಟಾಗುತ್ತದೆ. ನಮ್ಮಲ್ಲಿರುವ ಅನೇಕ ಪ್ರತಿಭೆಗಳೂ ಕಾರ್ಯಪ್ರಣಾಳಿಯ ಮೂಲಕವೇ ವ್ಯಕ್ತವಾಗಬೇಕು. ಮತ್ತು ಈ ಎಲ್ಲ ಆಂತರಿಕ ಸಾಧ್ಯತೆಗಳ ಅನಾವರಣವು ವ್ಯಕ್ತಿಯ ಆಧ್ಯಾತ್ಮಿಕ ಬೆಳವಣಿಗೆಗೆ ಆವಶ್ಯಕ. ಹೀಗೆ ನಮ್ಮ ಕೆಲಸದ ಬಗೆಗಿನ ದೃಷ್ಟಿಕೋನವೇ ಬದಲಾಗಬೇಕು.

ತಾಮಸಿಕ ಕರ್ಮವು ಮೋಹಪೂರಿತವಾಗಿರುತ್ತದೆ, ಇದರಿಂದ ಅಂತಹ ಕರ್ಮದ ಪರಿಣಾಮದ ಕಡೆಗೆ ವ್ಯಕ್ತಿಯು ಗಮನವನ್ನೇ ಕೊಡುವುದಿಲ್ಲ. ದುಡುಕಿ ಮಾಡುವ ಕರ್ಮವನ್ನು ಬಹುಶಃ ತಾಮಸಿಕವೆಂದು ಪರಿಗಣಿಸಬಹುದು. ಪೂರ್ವಾಪರ ಆಲೋಚಿಸದೆ ಮಾಡುವ ಕರ್ಮಗಳು ಅನೇಕ ಸಂದರ್ಭಗಳಲ್ಲಿ ಬಹಳ ತೊಡಕಿಗೆ ಕಾರಣವಾಗುತ್ತವೆ ಮತ್ತು ಇದರಿಂದಾಗಿ ವ್ಯಕ್ತಿಯು ಪರದಾಡಬೇಕಾಗುತ್ತದೆ. ತಾಮಸಿಕ ಕರ್ಮದಿಂದ ಅನವಶ್ಯಕ ಶಕ್ತಿಯ ಕ್ಷಯವಾಗುತ್ತದೆ, ಸಮಯ ನಷ್ಟವಾಗುತ್ತದೆ ಮತ್ತು ಎಲ್ಲ ರೀತಿಯ ಹಾನಿಯುಂಟಾಗುತ್ತದೆ. ಅವಿಚಾರಿತ ಸೇವಾಕಾರ್ಯವೂ ದುಷ್ಪರಿಣಾಮವನ್ನು ಉಂಟುಮಾಡುತ್ತದೆ. ಒಂದು ಮಂಗ ನೀರಿನಲ್ಲಿರುವ ಮೀನುಗಳನ್ನು ಹಿಡಿದು ಮರದ ಮೇಲೆ ಬಿಡುತ್ತಿತ್ತು. ಇದೇನು ಮಾಡುತ್ತಿರುವೆ ಎಂದು ವಿಚಾರಿಸಿದಾಗ ಅದು ತಾನು ಸೇವೆ ಮಾಡುತ್ತಿರುವುದಾಗಿ ಹೇಳಿತು. ಇದೆಂತಹ ಸೇವೆಯೆಂದು ಕೇಳಿದಾಗ, ''ಪಾಪ, ಮೀನುಗಳು ನೀರಿನಲ್ಲಿ ಬಿದ್ದು ಒದ್ದಾಡುತ್ತಿವೆ; ಅವುಗಳನ್ನು ಮರದ ಮೇಲೆ ಬಿಟ್ಟು ರಕ್ಷಿಸುತ್ತಿದ್ದೇನೆ'' ಎಂದು ತನ್ನ ಅಪೂರ್ವ ಸೇವಾ ಮನೋಭಾವವನ್ನು ವ್ಯಕ್ತಪಡಿಸಿತು. ಮಂಗನ ದೃಷ್ಟಿಯಲ್ಲಿ ಮರವೊಂದೇ ಸುರಕ್ಷಿತ ಸ್ಥಳ! ಇಂತಹ ವಾನರ ಸೇವೆಯನ್ನು ಬಹುಶಃ ತಾಮಸಿಕವೆಂದು ಪರಿಗಣಿಸಬಹುದು. ತಾಮಸಿಕ ಕರ್ಮದಲ್ಲಿ ಪೌರುಷವಿರುವುದಿಲ್ಲ, ಅದು ನಿರುತ್ಸಾಹದಿಂದ ಕೂಡಿರುತ್ತದೆ, ಮತ್ತು ಬಹುಪಾಲು ನಿಷ್ಪ್ರಯೋಜಕವಾಗಿರುತ್ತದೆ.

ಮುಂದಿನ ಮೂರು ಶ್ಲೋಕಗಳಲ್ಲಿ ಮೂರು ಬಗೆಯ ಕರ್ತೃಗಳ ಬಗ್ಗೆ ಶ್ರೀಕೃಷ್ಣನು ಹೇಳುತ್ತಾನೆ. ಸಾತ್ತ್ವಿಕ ಕರ್ತೃವು ಅನಾಸಕ್ತನೂ ನಿರಹಂಕಾರಿಯೂ ಧೃತಿ ಉತ್ಸಾಹದಿಂದ ಕೂಡಿದವನೂ ಸಿದ್ಧಿ ಅಸಿದ್ಧಿಗಳ ವಿಷಯದಲ್ಲಿ ಉದಾಸೀನನೂ ಆಗಿರುತ್ತಾನೆ. ಯಾವುದೇ ಕರ್ಮದಿಂದಲೂ ತಾನು ವೈಯಕ್ತಿಕವಾಗಿ ಏನನ್ನೂ ಪಡೆಯುವುದು ಇಲ್ಲದಿರುವುದರಿಂದ ಸಾತ್ತ್ವಿಕ ಸ್ವಭಾವದವನು ತನ್ನ ಪಾಲಿಗೆ ಬಂದ ಯಾವುದೇ ಕೆಲಸವನ್ನೂ ನಿರ್ಲಿಪ್ತ ಮನೋಭಾವದಿಂದ ಮಾಡುತ್ತಾನೆ. ಏನಾದರೂ ನೆವವನ್ನು ಒಡ್ಡಿ ಕೆಲಸದಿಂದ ನುಣುಚಿಕೊಳ್ಳಲು ಪ್ರಯತ್ನಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ ನಮಗೆ ಯಾವುದಾದರೂ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಇದ್ದಕ್ಕಿದ್ದಂತೆಯೇ ಮೈಕೈ ನೋವು ಅಥವಾ ಇನ್ನೇನಾದರೂ ಖಾಯಿಲೆ ಪ್ರಾರಂಭವಾಗಿ ಬಿಡುತ್ತದೆ! ಸಾತ್ತ್ವಿಕನ ಅನಾಸಕ್ತಿಗೆ ಮುಖ್ಯ ಕಾರಣ ಅವನಲ್ಲಿ ಅಹಂಭಾವ ಇಲ್ಲದೇ ಇರುವುದು. 'ಅಹಂ' ಯಾವಾಗಲೂ ತನಗೆ ಅದು ಬೇಕು, ಇದು ಬೇಡ ಎನ್ನುತ್ತಿರುತ್ತದೆ. ಈ ವೈಯಕ್ತಿಕ ಬೇಕು ಬೇಡಗಳು ಇಲ್ಲದಿದ್ದಾಗ ಯಾವುದೇ ಕೆಲಸವನ್ನಾದರೂ ಧೃತಿಯಿಂದಲೂ ಉತ್ಸಾಹದಿಂದಲೂ ಮಾಡಲು ಸಾಧ್ಯ. ಧೃತಿ ಎಂದರೆ ದೃಢತೆ – ಯಾವುದೇ ಕೆಲಸವನ್ನದರೂ ದೃಢ ನಿರ್ಧಾರದಿಂದ ಮಾಡುವ ಸಾಮರ್ಥ್ಯ. ಸ್ವಾಮಿ ವಿವೇಕಾನಂದರ ಪ್ರಕಾರ ಯಾವುದೇ ಕಾರ್ಯ ಸಾಧನೆಗೆ ಈ ಮೂರು ಗುಣಗಳು ಆವಶ್ಯಕ: ಪವಿತ್ರತೆ (Purity), ತಾಳ್ಮೆ (Patience) ಮತ್ತು ಸತತಪ್ರಯತ್ನ (Perseverance). ಪವಿತ್ರತೆಯೆಂದರೆ ನಾವು ಮಾಡುವ ಕೆಲಸದ ಹಿಂದೆ ರಾಗದ್ವೇಷಾದಿ ಕಲ್ಮಷಗಳು ಇರಬಾರದು, ನಮ್ಮ ಉದ್ದೇಶವು ಪವಿತ್ರವಾಗಿರಬೇಕು. ಕೆಟ್ಟ ವ್ಯಕ್ತಿಗಳು ರಾಗದ್ವೇಷಾದಿಗಳಿಂದ ಪ್ರೇರಿತರಾಗಿ ಕೆಟ್ಟ ಕಾರ್ಯಗಳನ್ನು ಅತ್ಯುತ್ಸಾಹದಿಂದ ಮಾಡಬಹುದು; ಆದರೆ ಅದರ ಹಿಂದಿನ ಉದ್ದೇಶ ಪವಿತ್ರವಾಗಿರುವುದಿಲ್ಲ. ಕಾರ್ಯ ಸಾಧನೆಯಲ್ಲಿ ಅನೇಕ ವಿಘ್ನಗಳು ಎದುರಾದರೂ ಎದೆಗುಂದದೆ ಮುಂದುವರಿಯಬೇಕಾದರೆ ತಾಳ್ಮೆ ಇರಬೇಕು ಮತ್ತು ಎಡೆಬಿಡದ ಸತತ ಪ್ರಯತ್ನ ಆವಶ್ಯಕ. ಈ ಮೂರು ಗುಣಗಳು ಧೃತಿಯ ಲಕ್ಷಣ ಗಳು. ಇಂತಹ ಧೃತಿಯಿಂದ ಕೂಡಿದ ಉತ್ಸಾಹ ಬಹಳ ಮುಖ್ಯ– ರಾವಣನ ಉತ್ಸಾಹವಲ್ಲ. ಧೃತಿ ಉತ್ಸಾಹಗಳಿಂದ ಕೂಡಿದ್ದರೂ ಕಾರ್ಯಸಾಧನೆಯಲ್ಲಿ ಸೋಲು ಉಂಟಾಗಬಹುದು. ಸಾತ್ತ್ವಿಕ ಕರ್ತೃವು ಸೋಲು ಗೆಲುವುಗಳಿಂದ ವಿಚಲಿತನಾಗದೆ ಕಾರ್ಯಸಾಧನೆಯಲ್ಲಿ ಮುಂದುವರಿಯುತ್ತಾನೆ. ಸೋಲಿನ ಬಗ್ಗೆ ನಮ್ಮ ದೃಷ್ಟಿಕೋನ ಬದಲಾಗಬೇಕು. ತುಂಬ ಅಧ್ಯಯನಶೀಲನಾದ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಪಾಸಾಗಲಿ ನಪಾಸಾಗಲಿ ಅವನು ಅಧ್ಯಯನದಿಂದ ಪಡೆದ ಜ್ಞಾನಕ್ಕೇನೂ ನಷ್ಟವಿಲ್ಲವಷ್ಟೆ! ಸೋಲಿನಿಂದಲೂ ನಾವು ಪಾಠ ಕಲಿಯಬಹುದಾದ್ದರಿಂದ ನಿಜವಾದ ಸೋಲೆಂಬುದು ಇಲ್ಲವೇ ಇಲ್ಲ ಎಂದು ಹೇಳಬಹುದು. ಸೋತಾಗ ಮತ್ತೆ ಪ್ರಯತ್ನಿಸದಿರುವುದೇ ನಿಜವಾದ ಸೋಲೆಂದು ತಿಳಿದವರು ಹೇಳುತ್ತಾರೆ.

ರಾಗವುಳ್ಳವನೂ ಕರ್ಮಫಲಾಪೇಕ್ಷಿಯೂ ಲೋಭಿಯೂ ಹಿಂಸಾತ್ಮಕನೂ ಅಶುಚಿಯೂ ಆದ, ಹರ್ಷಶೋಕಗಳಿಂದ ಕೂಡಿದ ಕರ್ತೃವು ರಾಜಸಿಕನೆಂದು ಶ್ರೀಕೃಷ್ಣನು ಹೇಳುತ್ತಾನೆ. ಅವನು ವಿಷಯಸುಖದಲ್ಲಿ ಆಸಕ್ತನಾದುದರಿಂದ (ರಾಗೀ) ಫಲಾಪೇಕ್ಷೆಗಾಗಿಯೇ ಕೆಲಸ ಮಾಡುತ್ತಾನೆ. ತನ್ನ ಅಪೇಕ್ಷೆ ಸಫಲವಾದರೆ ಹರ್ಷಗೊಳ್ಳುತ್ತಾನೆ, ಇಲ್ಲದಿದ್ದರೆ ಶೋಕಕ್ಕೊಳಗಾಗುತ್ತಾನೆ. ಅಪೇಕ್ಷೆಯೇ ದುಃಖ ಮತ್ತು ನಿರಪೇಕ್ಷೆಯೇ ಸುಖ ಎಂದು ಬುದ್ಧ ಹೇಳುತ್ತಾನೆ. ರಾಜಸಿಕ ಕರ್ತೃವು ಧನ ಲೋಭಿಯೂ ಯಶೋಲೋಭಿಯೂ ಜನಲೋಭಿಯೂ (ಅನೇಕರು ತನ್ನ ಅಧೀನದಲ್ಲಿರಬೇಕೆಂಬ ಆಸೆ) ಅಧಿಕಾರ ಲೋಭಿಯೂ ಆಗಿರುತ್ತಾನೆ. ಈ ಲೋಭದ ಪ್ರೇರಣೆಯಿಂದಾಗಿ ಇತರರಿಗೆ ನೋವಾದರೂ ತೊಂದರೆಯಾದರೂ ಹಾನಿಯಾದರೂ ಇವಾವುದನ್ನೂ ಪರಿಗಣಿಸದೆ ಅವನು ತನ್ನ ಕಾರ್ಯಸಾಧನೆಯಲ್ಲಿ ಮುನ್ನುಗ್ಗುತ್ತಾನೆ. ಈ ಸ್ಪರ್ಧಾತ್ಮಕ ವಿಷಯಗಳಿಕೆಯ ನಾಗಾಲೋಟದಲ್ಲಿ ನೈತಿಕ ಶುಚಿ–ಅಶುಚಿ ಇವಾವುದರ ಕಡೆಗೂ ಗಮನ ಕೊಡಲಾಗುವುದೇ ಇಲ್ಲ.

ತಾಮಸಿಕ ಕರ್ತೃವಿನಲ್ಲಿ ಯಾವುದೇ ರೀತಿಯ ಶಿಸ್ತು ನಿಯಮಗಳೂ ಇರುವುದಿಲ್ಲ. ಇದರಿಂದಾಗಿ ಅವನು ಅಸಭ್ಯವಾಗಿ ವರ್ತಿಸುತ್ತಾನೆ. ಅವನು ಜಡಸ್ವಭಾವದವನಾಗಿರುತ್ತಾನೆ. ತಾನೇ ಸ್ವಂತ ಬುದ್ಧಿ

ಯಿಂದ ತನ್ನನ್ನು ಬದಲಾಯಿಸಿಕೊಳ್ಳಲೂ ಆರ ಮತ್ತು ಇತರರೂ ಅವನನ್ನು ಬದಲಾಯಿಸಲಾರರು. ಕೆಲವು ತರಕಾರಿ ಬೇಳೆ ಮುಂತಾದವುಗಳು ಕುಕ್ಕರ್‌ನಲ್ಲಿಯೂ ಸರಿಯಾಗಿ ಬೇಯುವುದಿಲ್ಲ. ಹಾಗೆಯೇ ತಾಮಸಿಕರು ಎಂತಹ ಅನುಭವದಿಂದಲೂ ಬದಲಾಗುವುದಿಲ್ಲ. ಅವರು ಅತ್ಯಂತ ಒರಟು ಸ್ವಭಾವದವರು. ಅವರಲ್ಲಿ ಭೌತಿಕ ಚಟುವಟಿಕೆ ಇರುವುದಿಲ್ಲ, ಭಾವನಾತ್ಮಕವಾಗಿ ಅವರು ಸ್ಪಂದಿಸಲಾರರು ಮತ್ತು ಬೌದ್ಧಿಕವಾಗಿ ಚಿಂತಿಸಲಾರರು. ಆಲಸ್ಯ ಮತ್ತು ವಿಷಾದ (depression) ಅವರ ಜೀವನದಲ್ಲಿ ಎದ್ದು ಕಾಣುತ್ತಿರುತ್ತವೆ. ಅವರು ಇಂದಿನವರಲ್ಲ, ನಾಳೆಯವರು – ನಾಳೆ ಮಾಡೋಣವೆಂದು ಮುಂದೂಡುತ್ತ (ದೀರ್ಘಸೂತ್ರೀ) ಹೋಗುತ್ತಾರೆ – ಊಟ ಮತ್ತು ನಿದ್ರೆಗಳನ್ನು ಬಿಟ್ಟು. ಸಂಸ್ಕೃತದ ಒಂದು ಸುಭಾಷಿತವನ್ನು ಇಲ್ಲಿ ಉದಾಹರಿಸಬಹುದು:

**ಷಡ್‌ದೋಷಾಃ ಪುರುಷೇಣೇಹ ಹಾತವ್ಯಾ ಭೂತಿಮಿಚ್ಛತಾ ।**
**ನಿದ್ರಾ ತಂದ್ರಾ ಭಯಂ ಕ್ರೋಧಃ ಆಲಸ್ಯಂ ದೀರ್ಘಸೂತ್ರತಾ ॥**

''ಐಶ್ವರ್ಯವನ್ನು ಬಯಸುವವನು ನಾಲ್ಕು ದೋಷಗಳನ್ನು ನಿರ್ನಾಮ ಮಾಡಬೇಕು: ನಿದ್ರೆ, ಮೈಗಳ್ಳತನ, ಹೆದರಿಕೆ, ಕೋಪ, ಸೋಮಾರಿತನ ಮತ್ತು ದೀರ್ಘಸೂತ್ರತೆ (ನಿಧಾನವಾಗಿ ಕೆಲಸ ಮಾಡುವುದು).''

ಶ್ಲೋಕ ೩೦ ರಿಂದ ೩೨ರ ವರೆಗೆ ಮೂರು ವಿಧದ ಬುದ್ಧಿಯ ಬಗ್ಗೆ ಶ್ರೀಕೃಷ್ಣನು ಹೇಳುತ್ತಾನೆ. ಪ್ರವೃತ್ತಿ–ನಿವೃತ್ತಿ, ಕಾರ್ಯ–ಅಕಾರ್ಯ, ಭಯ–ಅಭಯ ಮತ್ತು ಬಂಧ–ಮೋಕ್ಷ – ಇವುಗಳ ಪಾರ್ಥಕ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವುಳ್ಳ ಬುದ್ಧಿಯು ಸಾತ್ತ್ವಿಕವಾದುದು. ಪ್ರವೃತ್ತಿಯೆಂದರೆ ಬಹಿರ್ಮುಖ ವೃತ್ತಿ, ಮತ್ತು ನಿವೃತ್ತಿಯೆಂದರೆ ಅಂತರ್ಮುಖ ವೃತ್ತಿ. ಆಧ್ಯಾತ್ಮಿಕ ಪ್ರಗತಿಗೆ ನಿವೃತ್ತಿಯು ಅತ್ಯಾವಶ್ಯಕವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಪ್ರವೃತ್ತಿಯೆಂದರೆ ಬಾಹ್ಯ ವಿಷಯಗಳ ಕಡೆ ಮನಸ್ಸನ್ನು ಹರಿಸುವುದು. ನಿವೃತ್ತಿಯೆಂದರೆ ಅಂತರಾತ್ಮನ ಕಡೆ ಮನಸ್ಸನ್ನು ಹರಿಸುವುದು. ನಮ್ಮ ಯಾವ ನಡೆ, ನುಡಿ, ಚಿಂತನೆಗಳು ನಮ್ಮನ್ನು ಬಹಿರ್ಮುಖಗೊಳಿಸುತ್ತವೆ, ಯಾವುವು ಅಂತರ್ಮುಖಗೊಳಿಸುತ್ತವೆ ಎಂಬ ಬುದ್ಧಿಸೂಕ್ಷ್ಮತೆ ನಮಗಿರಬೇಕು. ಆಗ ಯಾವುದು ಕಾರ್ಯ, ಯಾವುದು ಅಕಾರ್ಯ ಎಂಬುದು ಸ್ವಾಭಾವಿಕವಾಗಿ ತಿಳಿದುಬರುತ್ತದೆ. ಯಾವುದು ನಮ್ಮನ್ನು ಬಹಿರ್ಮುಖಗೊಳಿಸುವುದೋ ಆ ವಿಷಯದಲ್ಲಿ ನಾವು ಭಯಪಡಬೇಕು, ಅಂದರೆ ಸದಾ ಜಾಗರೂಕರಾಗಿರಬೇಕು (eternal vigilance). ಇಂತಹ ಜಾಗೃತಬುದ್ಧಿಯೇ ಸಾತ್ತ್ವಿಕವಾದುದು. ಆಧ್ಯಾತ್ಮಿಕ ಜೀವನವೆಂದರೆ ಕತ್ತಿಯ ಅಲಗಿನ ಮೇಲೆ ನಡೆದಂತೆ, ಸದಾ ಎಚ್ಚರಿಕೆಯಿಂದಿರು ಎಂದು *ಕಠೋಪನಿಷತ್ತು* ಎಚ್ಚರಿಸುತ್ತದೆ. ಸಾತ್ತ್ವಿಕ ಬುದ್ಧಿಯು ತುಂಬ ಸೂಕ್ಷ್ಮವಾದುದು, ಸ್ವಲ್ಪ ಬಂಧಕಾರಿಯಾದುದನ್ನೂ ಕೂಡಲೇ ಅರ್ಥಮಾಡಿಕೊಂಡು ಅದರಿಂದ ದೂರವಿರುತ್ತದೆ. ಅದೂ ಯಾವಾಗಲೂ ಸ್ವಾತಂತ್ರ್ಯವನ್ನು ಬಯಸುತ್ತದೆ, ಯಾವುದೇ ರೀತಿಯ ಬಂಧನವನ್ನೂ ಇಷ್ಟಪಡುವುದಿಲ್ಲ.

ಇದಕ್ಕೆ ವಿರುದ್ಧವಾದುದೇ ರಾಜಸಿಕ ಬುದ್ಧಿ. ಧರ್ಮ–ಅಧರ್ಮ, ಕಾರ್ಯ–ಅಕಾರ್ಯ ಇತ್ಯಾದಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಅದಕ್ಕಿರುವುದಿಲ್ಲ. ರಜ್ ಎಂದರೆ ಧೂಳು, ವಾತಾವರಣ ಧೂಳಿನಿಂದ ಆವೃತವಾಗಿದ್ದರೆ ಯಾವುದೂ ಸರಿಯಾಗಿ ಕಾಣಿಸುವುದಿಲ್ಲ. ಹಾಗೆಯೇ ಕಾಮಕ್ರೋಧಾದಿ ಭಾವವಿಕಾರಗಳಿಂದ ಮನಸ್ಸು ಆವೃತವಾಗಿದ್ದರೆ ವಿವೇಕ ಬುದ್ಧಿ ಹೊರಟುಹೋಗುತ್ತದೆ. ಇದೇ ರಾಜಸಿಕ ಬುದ್ಧಿ. ಇಂತಹ ಬುದ್ಧಿಯು ಆಸೆಗಳ ಹಿಡಿತದಲ್ಲಿ ಇರುತ್ತದೆ. ಇದು ಆಸೆಗಳನ್ನು ನಿಯಂತ್ರಿಸುವ ಬದಲು ಆಸೆಗಳೇ ಇದನ್ನು ನಿಯಂತ್ರಿಸುತ್ತಿರುತ್ತವೆ. ಇದು ಆಳುಗಳೇ ಯಜಮಾನನ ಮೇಲೆ ಯಜಮಾನಿಕೆ ನಡೆಸುವಂತೆ. ಬುದ್ಧಿಯ ಕೆಲಸವೇನೆಂದರೆ ಯಾವುದು ಸರಿ ಯಾವುದು ತಪ್ಪು ಎಂಬುದಕ್ಕೆ ಅನುಗುಣವಾಗಿ ಆಸೆಗಳನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು. ಆಧ್ಯಾತ್ಮಿಕ ಆದರ್ಶ, ಹೊರಗಿನ ಸನ್ನಿವೇಶ ಮತ್ತು ಇತರರ ಹಿತದೃಷ್ಟಿ – ಇವುಗಳನ್ನೆಲ್ಲ ದೃಷ್ಟಿಯಲ್ಲಿ ಇಟ್ಟುಕೊಂಡು ಯಾವ ಆಸೆಗಳನ್ನು ಪೂರ್ತಿಗೊಳಿಸಬಹುದು, ಯಾವುದನ್ನು ನಿಗ್ರಹಿಸಬೇಕು ಎಂಬುದನ್ನು ನಿರ್ಣಯಿಸುವ ಸಾಮರ್ಥ್ಯ ಬುದ್ಧಿಗಿರಬೇಕು. ಆದರೆ ರಾಜಸಿಕ ಬುದ್ಧಿಗೆ ಇಂತಹ ನಿರ್ಣಯಸಾಮರ್ಥ್ಯ ಇರುವುದಿಲ್ಲ.

ಶಿಕ್ಷಣ ತನಿಖಾಧಿಕಾರಿಗಳು ಒಮ್ಮೆ ಪೂರ್ವಸೂಚನೆಯಿಲ್ಲದೆ ಒಂದು ಶಾಲೆಗೆ ಭೇಟಿಯಿತ್ತು, ನೇರವಾಗಿ ಒಂದು ತರಗತಿಗೆ ಹೋದರು. ಅಲ್ಲಿ ದೊಡ್ಡ ಗಲಾಟೆ. ವಿದ್ಯಾರ್ಥಿಗಳೆಲ್ಲ ಕುಣಿದು ಕುಪ್ಪಳಿಸುತ್ತಿದ್ದಾರೆ, ಕೂಗಾಡುತ್ತಿದ್ದಾರೆ. ಅಧಿಕಾರಿಗಳು ಅವರಲ್ಲಿ ಎತ್ತರದ ಒಬ್ಬನನ್ನು ಎಳೆದು ತರಗತಿಯಿಂದ ಹೊರಗೆ ದಬ್ಬಿದರು. ಅನಂತರ ವಿದ್ಯಾರ್ಥಿಗಳನ್ನೆಲ್ಲ ಕೂರಿಸಿ, ಶಿಸ್ತಿನ ಬಗ್ಗೆ ಅರ್ಧಗಂಟೆ ಉಪನ್ಯಾಸ ನೀಡಿದರು. ಕೊನೆಯ ಒಬ್ಬ ವಿದ್ಯಾರ್ಥಿಯು ಎದ್ದು ನಿಂತು, ''ಸಾರ್, ಈಗ ನಮ್ಮ ಮೇಷ್ಟ್ರು ಒಳಗೆ ಬರಬಹುದೆ?'' ಎಂದು ಕೇಳಿದ. ಅಧಿಕಾರಿಗಳು ಹೊರಗೆ ಕಳಿಸಿದ ವ್ಯಕ್ತಿ ಮತ್ತಾರೂ ಅಲ್ಲ, ಉಪಾಧ್ಯಾಯರು! ವಿದ್ಯಾರ್ಥಿಗಳನ್ನು ನಿಯಂತ್ರಿಸಬೇಕಾದ ಉಪಾಧ್ಯಾಯರೇ ವಿದ್ಯಾರ್ಥಿಗಳಂತೆ ಆಡಲು ಪ್ರಾರಂಭಿಸಿದರೆ ಹೇಗೆ? ಹಾಗೆಯೇ ಆಸೆಗಳನ್ನು ನಿಯಂತ್ರಿಸಬೇಕಾದ ಬುದ್ಧಿಯೇ ಆಸೆಗಳೊಡನೆ ಕುಣಿಯತೊಡಗಿದರೆ ಆ ವ್ಯಕ್ತಿಯ ಸ್ಥಿತಿ ಹೇಗಿರುತ್ತದೆ ಎಂಬುದನ್ನು ನಾವು ಊಹಿಸಬಹುದು.

ಇನ್ನು ತಾಮಸಿಕ ಬುದ್ಧಿಯ ಕತೆ ಕೇಳಲೇಬೇಕಾಗಿಲ್ಲ. ಅದು ಅಧರ್ಮವನ್ನೇ ಧರ್ಮವೆಂದು ಪರಿಗಣಿಸುತ್ತದೆ. ಮೋಸ, ವಂಚನೆ ಇತ್ಯಾದಿಗಳೇ ಧರ್ಮವಾಗಿ ಕಾಣುತ್ತವೆ. ಇನ್ನೊಬ್ಬರ ಮನೆಯ ತೋಟದಿಂದ ಹೂವನ್ನು ಕದ್ದು ತಂದು ತಮ್ಮ ಮನೆಯ ದೇವರಿಗೆ ಅರ್ಪಿಸುವ ಭಕ್ತರೂ ಇರುತ್ತಾರೆ. ಅನೇಕರು ಅಸತ್ಯ, ಅನೈತಿಕ ಮಾರ್ಗವನ್ನು ಅನುಸರಿಸಿ ಸಮಾಜ ಸೇವಾಕಾರ್ಯಗಳನ್ನು ಕೈಗೊಳ್ಳುತ್ತಾರೆ. ಇದರಿಂದ ಸಮಾಜದಲ್ಲಿ ಅಧರ್ಮಕ್ಕೇ ಬೆಂಬಲವಿತ್ತಂತಾಗಿ ಮುಂದೆ ಸಮಾಜವು ಅಧೋಗತಿಗೆ ಇಳಿಯುವುದೆಂಬ ಬುದ್ಧಿಸೂಕ್ಷ್ಮತೆ ಅವರಿಗಿರುವುದಿಲ್ಲ. ತಾಮಸಿಕ ಬುದ್ಧಿಗೆ ಎಲ್ಲವೂ ವಿಪರೀತವಾಗಿ ಕಾಣುತ್ತದೆ, ಯಾವುದನ್ನೂ ಯಥಾರ್ಥವಾಗಿ ತಿಳಿದುಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಮನಸ್ಸು ಯಾವು

ದಾದರೂ ಭಾವೋದ್ವೇಗದಿಂದ ಪೀಡಿತವಾಗಿರುತ್ತದೆ. ತುಂಬ ಹಾವಿನ ಭಯ ಇರುವವನು ಹಗ್ಗದಲ್ಲಿಯೂ ಹಾವನ್ನು ಕಾಣುತ್ತಾನೆ. ಚಿನ್ನಬೆಳ್ಳಿಯ ಆಸೆಯಿಂದ ಪೀಡಿತನಾದವನಿಗೆ ಕಪ್ಪೆಚಿಪ್ಪು ಬೆಳ್ಳಿಯಾಗಿ ಕಾಣುತ್ತದೆ. ತುಂಬ ಪಾಪಪ್ರಜ್ಞೆ ಇರುವವನು ಇತರರ ಮಾತು–ಕೃತಿ–ವರ್ತನೆಗಳನ್ನು ತನಗೆ ವಿರುದ್ಧವಾಗಿ ಪರಿಗಣಿಸುತ್ತಾನೆ. ತನಗೆ ವಿರುದ್ಧವಾಗಿ ಏನೋ ಪಿತೂರಿ ನಡೆಯುತ್ತಿದೆ ಎಂದು ಅವನು ಭಾವಿಸಬಹುದು. ನಮಗಾಗದವರ ಸದ್ಗುಣವೂ ದುರ್ಗುಣವಾಗಿ ಕಂಡುಬರುತ್ತದೆ. ಹೀಗೆ ತಾಮಸ ಬುದ್ಧಿಗೆ ವಾಸ್ತವದೃಷ್ಟಿ ಇರುವುದೇ ಇಲ್ಲ. ಸಾತ್ತ್ವಿಕ ಬುದ್ಧಿಗೆ ಹಗ್ಗವು ಹಗ್ಗವಾಗಿಯೇ ಕಾಣುತ್ತದೆ, ರಾಜಸಿಕ ಬುದ್ಧಿಗೆ ಅದೇನೆಂಬುದು ಸರಿಯಾಗಿ ತಿಳಿದುಬರುವುದಿಲ್ಲ, ಮತ್ತು ತಾಮಸಿಕ ಬುದ್ಧಿಗೆ ಅದು ಹಾವಾಗಿ ಕಾಣುತ್ತದೆ.

ಮುಂದೆ ಮೂರು ಬಗೆಯ ಧೃತಿಯ ವಿಚಾರ ಬರುತ್ತದೆ. ಧೃತಿ ಎಂದರೆ ದೃಢತೆ, ಅಂದರೆ ದೃಢನಿರ್ಧಾರ, ದೃಢ ಸಂಕಲ್ಪ. ಇದು ಆಧ್ಯಾತ್ಮಿಕ ಆದರ್ಶದಿಂದ ಕೂಡಿರಬೇಕು. ಆದ್ದರಿಂದಲೇ ಶ್ರೀಕೃಷ್ಣನು **'ಯೋಗೇನ'** ಎಂಬ ಶಬ್ದವನ್ನು ಶ್ಲೋಕದಲ್ಲಿ ಬಳಸಿದ್ದಾನೆ. ಈ ರೀತಿ ಯೋಗದ ಮೂಲಕ, ಆದರ್ಶದಿಂದ ಸ್ವಲ್ಪವೂ ವಿಚಲಿತವಾಗದೆ ಮನಸ್ಸು, ಪ್ರಾಣ ಮತ್ತು ಇಂದ್ರಿಯಗಳ ಕ್ರಿಯೆಗಳನ್ನು ವ್ಯಕ್ತಿಯು ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡರೆ ಅಂತಹ ದೃಢತೆಯನ್ನು, ಸ್ಥಿರತೆ ಯನ್ನು ಸಾತ್ತ್ವಿಕ ಧೃತಿ ಎಂದು ಕರೆಯಬಹುದು. ಈ ಧೃತಿ ಸೌಮ್ಯವಾಗಿರುತ್ತದೆ, ಆದರೂ ದೃಢವಾಗಿರುತ್ತದೆ. ಒರಟುತನ ಸಾತ್ತ್ವಿಕ ಧೃತಿಯಲ್ಲ. ಒಂದು ಬೀಜವು ಮೊಳಕೆಯೊಡೆದು, ನೆಲವನ್ನು ಭೇದಿಸಿಕೊಂಡು ಹೊರಬರುತ್ತದೆ. ಮೊಳಕೆ ಮೃದುವಾದರೂ ತುಂಬ ದೃಢವಾದುದು. ಹಾಗೆಯೇ ನಾವು ಇಂದ್ರಿಯ ಮನಸ್ಸುಗಳನ್ನು ಮೃದುವಾಗಿ, ಅವುಗಳ ದಿಕ್ಕನ್ನು ಬದಲಾಯಿಸುವುದರ ಮೂಲಕ ನಿಗ್ರಹಿಸಬೇಕು. ಜೋರಾದ ಬಲಪ್ರಯೋಗದ ಮೂಲಕ ಅವನ್ನು ನಿಗ್ರಹಿಸಲಾಗುವುದಿಲ್ಲ. ಒಂದು ಮಗುವಿನ ಕೈಯಲ್ಲಿರುವ ವಸ್ತುವನ್ನು ತೆಗೆದುಕೊಳ್ಳಬೇಕಾದರೆ ಬಲವಾಗಿ ಕಿತ್ತುಕೊಳ್ಳಲು ಹೋದರೆ ನಡೆಯುವುದಿಲ್ಲ. ಮೃದುವಾಗಿ ಅದರ ಮನಸ್ಸನ್ನು ಬೇರೆಡೆಗೆ ಹರಿಸಿದಾಗ ತಾನೇ ವಸ್ತುವನ್ನು ಬಿಟ್ಟು ಬೇರೆ ಕಡೆ ಹೊರಟು ಹೋಗುತ್ತದೆ. ಮನಸ್ಸಿನ ನಿಗ್ರಹ ಹೀಗೆ ನಡೆಯಬೇಕು. ಈ ರೀತಿಯ ದೃಢತೆ ರೇಶ್ಮೆ ದಾರವಿದ್ದಂತೆ. ಶ್ರೀರಾಮಕೃಷ್ಣರು ಹೇಳುವಂತೆ ರೇಶ್ಮೆದಾರದ ಮೂಲಕ ಮನಸ್ಸನ್ನು ಭಗವಂತನ ಪಾದಕ್ಕೆ ಕಟ್ಟಬೇಕು.

ರಾಜಸಿಕ ಧೃತಿಯು ಪ್ರಾಪಂಚಿಕ ವಿಷಯದಲ್ಲಿ ಅತ್ಯಂತ ದೃಢವಾಗಿರುತ್ತದೆ. ಕೆಲವರು ಕೆಲವು ಬಗೆಯ ಧರ್ಮಾಚರಣೆಗಳಿಗೆ ದೃಢವಾಗಿ ಅಂಟಿಕೊಂಡಿರುತ್ತಾರೆ. ಅದರಿಂದೇನೂ ಪ್ರಯೋಜನವಿಲ್ಲದಿದ್ದರೂ ಅವರ ಪ್ರಗತಿ ಕುಂಠಿತವಾಗುತ್ತಿದ್ದರೂ ಅವರದನ್ನು ಬಿಡಲಾರರು. ಅನೇಕರು ವಿಷಯಸುಖ, ಅಧಿಕಾರ, ಸಂಪತ್ತು ಇತ್ಯಾದಿಗಳಿಗಾಗಿ ಅತ್ಯಂತ ದೃಢಸಂಕಲ್ಪದಿಂದ ದುಡಿಯುತ್ತಾರೆ. ದುರ್ಯೋಧನನ ಛಲವನ್ನು ರಾಜಸಿಕ ಧೃತಿ ಎಂದು ಕರೆಯಬಹುದು. ಆದರೆ ಇಂತಹ ಧೃತಿಯಿಂದ ನಮ್ಮ ಆಯಸ್ಸು ಸುಮ್ಮನೆ ಕ್ಷೀಣವಾಗುವುದೇ ಹೊರತು ಆಸೆಗಳಿಂದ ತೃಪ್ತಿ ದೊರೆಯುವುದೇ ಇಲ್ಲ. ಏಕೆಂದರೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಆಸೆಗಳನ್ನು ತೃಪ್ತಿಪಡಿಸುವ ಶಕ್ತಿಯು ಒಂದು ಪಟ್ಟು ವೃದ್ಧಿಯಾದರೆ, ಆಸೆಗಳ ಶಕ್ತಿಯು ಹತ್ತು ಪಟ್ಟು ವೃದ್ಧಿಯಾಗುತ್ತದೆ.'' (If the power of satisfying the desires increases arithmetical progression, the power of desire itself increases in geometrical pregression).

ಇನ್ನು ಅನೇಕರಿಗೆ ಜೀವನದಲ್ಲಿ ಸುಖಪಡುವ ಯೋಗ್ಯತೆಯೂ ಇರುವುದಿಲ್ಲ. ಏನೇನೋ ಕನಸಿನ ಲೋಕದಲ್ಲಿ ವಿಹರಿಸುತ್ತಾರೆ, ಏನೇನೋ ಮೂಢನಂಬಿಕೆಗಳಿಗೆ ಅಂಟಿಕೊಂಡು ಪರದಾಡುತ್ತಾರೆ, ಅವರನ್ನು ಇಲ್ಲಸಲ್ಲದ ಭಯ ಕಾಡುತ್ತಿರುತ್ತದೆ ಮತ್ತು ಶೋಕಿಸುವುದೇ ಅವರ ಸ್ವಭಾವವಾಗಿಬಿಟ್ಟಿರುತ್ತದೆ. ಇಂತಹ ವ್ಯಕ್ತಿಗಳ ಧೃತಿಯನ್ನು ತಾಮಸಿಕ ಎಂದು ಕರೆಯಲಾಗಿದೆ. ರಾಜಸಿಕ ಧೃತಿಯುಳ್ಳವರು ರಾಜಕೀಯ, ವ್ಯಾಪಾರ ಮುಂತಾದ ಕ್ಷೇತ್ರಗಳಲ್ಲಿ ಏನನ್ನಾದರೂ ಸಾಧಿಸಬಲ್ಲರು. ಆದರೆ ತಾಮಸಿಕ ಧೃತಿಯುಳ್ಳವರು ಜೀವನದಲ್ಲಿ ಏನನ್ನೂ ಸಾಧಿಸಲಾರರು. ಶೋಕವೇ ಅವರ ಅಹಂಕಾರಕ್ಕೆ ಒಂದು ಆಶ್ರಯವಾಗಿಬಿಟ್ಟಿರುತ್ತದೆ. ಅವರು ಅಪ್ರಜ್ಞಾಪೂರ್ವಕವಾಗಿ ದುಃಖವನ್ನು ಬರಮಾಡಿಕೊಳ್ಳುತ್ತಾರೆ. ತಮ್ಮ ದುಃಖವನ್ನು ಮೆಲುಕು ಹಾಕುವುದರಲ್ಲಿಯೇ ಒಂದು ವಿಕೃತ ಸುಖವನ್ನು ಕಾಣುತ್ತಾರೆ. ಸಾತ್ತ್ವಿಕ ಧೃತಿಯುಳ್ಳವರು ಆಧ್ಯಾತ್ಮಿಕ ಆದರ್ಶವನ್ನು ದೃಢವಾಗಿ ಹಿಡಿದುಕೊಂಡಿರುತ್ತಾರೆ; ರಾಜಸಿಕ ಧೃತಿಯುಳ್ಳವರು ಪ್ರಾಪಂಚಿಕ ಆದರ್ಶವನ್ನು ದೃಢವಾಗಿ ಹಿಡಿದುಕೊಂಡಿರುತ್ತಾರೆ. ತಾಮಸಿಕ ಧೃತಿಯುಳ್ಳವರು ಯಾವುದಾದರೂ ಪೂರ್ವಾಗ್ರಹಪೀಡಿತರಾಗಿ ತೊಳಲಾಡುತ್ತಿರುತ್ತಾರೆ.

೩೭, ೩೮ ಮತ್ತು ೩೯ನೇ ಶ್ಲೋಕದಲ್ಲಿ ಮೂರು ಬಗೆಯ ಸುಖವನ್ನು ಕುರಿತು ಹೇಳಲಾಗಿದೆ. ಸಾತ್ತ್ವಿಕ ಸುಖವು ಪ್ರಾರಂಭದಲ್ಲಿ ವಿಷಪ್ರಾಯವಾಗಿರುತ್ತದೆ, ಆದರೆ ಕೊನೆಯಲ್ಲಿ ಅಮೃತದಂತಿರುತ್ತದೆ. ಆಧ್ಯಾತ್ಮಿಕ ಸಾಧನೆಯ ಪ್ರಾರಂಭದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಮೊದಲು ದೇಹವೇ ಮುಷ್ಕರ ಹೂಡುತ್ತದೆ, ಮನಸ್ಸು ಪ್ರತಿಭಟಿಸುತ್ತದೆ, ಹಳೆಯ ಸಂಸ್ಕಾರಗಳು ಎಡೆಬಿಡದೆ ಬಲಯುತವಾಗಿ ಹಿಂದಕ್ಕೆ ಎಳೆಯುತ್ತವೆ, ಮತ್ತು ಅನೇಕ ಪ್ರಲೋಭನೆಗಳು ವಿಮುಖಗೊಳಿಸಲು ಪ್ರಯತ್ನಿಸುತ್ತವೆ. ಹೀಗಾಗಿ ಅನೇಕ ಬಾಹ್ಯ ಮತು ಆಂತರಿಕ ಪ್ರತಿಕ್ರಿಯೆಗಳನ್ನೂ ಸಂದೇಹ ಗೊಂದಲಗಳನ್ನೂ ಎದುರಿಸಬೇಕಾಗುತ್ತದೆ. ಈ ನರಕಯಾತನೆ ಸಾಕಪ್ಪ ಎನಿಸುತ್ತದೆ. ಆದರೆ ಪಟ್ಟುಹಿಡಿದು ಮುಂದುವರಿದರೆ, ಬಿರುಗಾಳಿಯಿಂದ ಪಾರಾದ ಹಡಗು ಶಾಂತವಾಗಿ ಮುಂದುವರಿಯುವಂತೆ, ಆಧ್ಯಾತ್ಮಿಕ ಜೀವನವು ಆನಂದದಾಯಕವಾಗುತ್ತದೆ. ಮನಸ್ಸು ಶಾಂತವಾದಾಗ, ಬುದ್ಧಿಯು ಪ್ರಸನ್ನವಾದಾಗ ಆತ್ಮದ ಸ್ವಭಾವವಾದ ಆನಂದವು ಹೊರಹೊಮ್ಮುತ್ತದೆ. ಆದ್ದರಿಂದ ಈ ಸುಖವನ್ನು **ಆತ್ಮಬುದ್ಧಿ ಪ್ರಸಾದಜಂ** ಎಂದು ಕರೆದಿರುವುದು. ಇದು ಯಾವುದೇ ಹೊರಗಿನ ವಿಷಯವನ್ನು ಅವಲಂಬಿಸಿರುವುದಿಲ್ಲ, ಬಾಹ್ಯನಿಮಿತ್ತಕ್ಕೆ ಒಳಪಟ್ಟಿರುವುದಿಲ್ಲ (not conditioned); ಇದು ಆತ್ಮವಶವಾದ ಸುಖ. ಈ ಕೆಳಗಿನ ಶ್ಲೋಕವನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು:

**ಸರ್ವಂ ಪರವಶಂ ದುಃಖಂ ಸರ್ವಂ ಆತ್ಮವಶಂ ಸುಖಮ್ ।**
**ಏತತ್ ಪ್ರೋಕ್ತಂ ಸಮಾಸೇನ ಲಕ್ಷಣಂ ಸುಖದುಃಖಯೋಃ ॥**